# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂ.ವಿ./ಪ.ವಿ./ಮ.ಮೌ/2022-23/ಇ.30

ಕುಲಸಚಿವ(ಪರೀಕ್ಷಾಂಗ)ರ ಕಚೇರಿ,
ಮಂಗಳಗಂಗೋತ್ರಿ – 574199
ದಿನಾಂಕ: 08.09.2022

## ಸುತ್ತೋಲೆ

ವಿಷಯ: ಮೇ 2019, ನವೆಂಬರ್ 2019 ಮತ್ತು ಸೆಪ್ಟೆಂಬರ್ 2020ರಲ್ಲಿ ಜರುಗಿದ ವಿವಿಧ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿ ಮರುಮೌಲ್ಯಮಾಪನದ ಶೇ.50ರಷ್ಟು ಮೊತ್ತವನ್ನು ಅರ್ಹರಾದ ವಿದ್ಯಾರ್ಥಿಗಳಿಗೆ ಹಿಂದಿರುಗಿಸುವ ಬಗ್ಗೆ.

* * *

ವಿಶ್ವವಿದ್ಯಾನಿಲಯದ ಮರುಮೌಲ್ಯಮಾಪನ ನಿಯಮಾವಳಿ ಪ್ರಕಾರ ಮೇಲಿನ ವಿಷಯಕ್ಕೆ ಸಂಬಂಧಿಸಿ ವಿವಿಧ ವಿಷಯಗಳಲ್ಲಿ ಮರುಮೌಲ್ಯಮಾಪನವನ್ನು ಕೋರಿ ತದನಂತರ ಶೇ.10ಕ್ಕಿಂತ ಹೆಚ್ಚು (ಕೃಪಾಂಕ ಹೊರತುಪಡಿಸಿ) ಅಂಕಗಳನ್ನು ಪಡೆದ ಈ ಕೆಳಗಿನ ನೋಂದಣಿ ಸಂಖ್ಯೆಯ ವಿದ್ಯಾರ್ಥಿಗಳು ಮರುಮೌಲ್ಯಮಾಪನದ ಶುಲ್ಕ (Fees) ದ ಶೇ.50ರಷ್ಟನ್ನು ಹಿಂದಿರುಗಿ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಸದರಿ ಮೊತ್ತವನ್ನು ಪಡೆದುಕೊಳ್ಳಲು ಅರ್ಹರಾದ ವಿದ್ಯಾರ್ಥಿಗಳು ತಮ್ಮ ಅರ್ಜಿಗಳಲ್ಲಿ ಈ ಕೆಳಗೆ ಕಾಣಿಸಿದ ವಿವರಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳನ್ನು ಒದಗಿಸುವಂತೆ ಕೋರಲಾಗಿದೆ.

(1) ಪದವಿ / ಕೋರ್ಸುಗಳ ವಿವರ.

(2) ಸೆಮಿಸ್ಟರ್ ವಿವರ.

(3) ST/ST ಅನ್ವಯಿಸುವಲ್ಲಿ.

(4) ಯಾವ ವಿಷಯಕ್ಕೆ ಮರುಮೌಲ್ಯಮಾಪನದ ಮೊತ್ತವನ್ನು ಹಿಂದಿರುಗಿಸುವುದು.

(5) ಮರುಮೌಲ್ಯಮಾಪನದ ನಂತರ ಪಡೆದ ಅಂಕಪಟ್ಟಿಯ ಜೆರಾಕ್ಸ್ ಪ್ರತಿ.

(6) ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಿದ ಬಗ್ಗೆ ರಶೀದಿ/ಚಲನ್/ಡಿ.ಡಿ. ಸಂಖ್ಯೆ, ದಿನಾಂಕ, ಮತ್ತು ಜೆರಾಕ್ಸ್ ಪ್ರತಿ.

(7) ಹಿಂದಿರುಗಿಸಬೇಕಾದ ಮೊತ್ತ (ಅರ್ಜಿ ಶುಲ್ಕವನ್ನು ಹೊರತುಪಡಿಸಿ ಕೇವಲ ಅರ್ಹತೆ ಪಡೆದ ವಿಷಯಕ್ಕೆ ಪಾವತಿಸಿದ ಮರುಮೌಲ್ಯಮಾಪನ ಮೊತ್ತದ ಅರ್ಧದಷ್ಟು ಮಾತ್ರ).

(8) ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು (ಮಾದರಿ ಅರ್ಜಿಯನ್ನು ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ).

ತಮ್ಮ ಅರ್ಜಿಗಳನ್ನು ಪ್ರಾಂಶುಪಾಲರ ಮುಖಾಂತರ ದಿನಾಂಕ **23.09.2022**ರೊಳಗೆ ಸಲ್ಲಿಸುವುದು, ಅಪೂರ್ಣವಾದ ಮತ್ತು ತಡವಾಗಿ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಹಿಂದಿರುಗಿ ಪಡೆಯುವ ಮರುಮೌಲ್ಯಮಾಪನದ ಮೊತ್ತವು ರೂ.500.00ಕ್ಕಿಂತ ಮೇಲ್ಪಟ್ಟಿದ್ದಲ್ಲಿ ಅರ್ಜಿಯಲ್ಲಿ ರೆವಿನ್ಯೂ ಸ್ಟಾಂಪನ್ನು ಲಗತ್ತಿಸುವುದು.

ಈ ವಿಷಯವನ್ನು ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಹಾಗೂ ವಿದ್ಯಾರ್ಥಿಗಳು ಅರ್ಜಿಗಳಲ್ಲಿ ಈ ಮೇಲೆ ಹೇಳಿದ ವಿವರಗಳನ್ನು ಸಂಪೂರ್ಣವಾಗಿ ಬರೆದಿದ್ದಾರೆಯೇ ಎಂದು ಕೂಲಂಕುಷವಾಗಿ ಪರಿಶೀಲಿಸಿ ಅರ್ಜಿಗಳನ್ನು ಕಳುಹಿಸುವಂತೆ ಸೂಚಿಸಲಾಗಿದೆ. ಯಾವುದೇ ಕಾರಣಕ್ಕೂ ಒಂದೊಂದೇ ಅರ್ಜಿಗಳನ್ನು ಕಳುಹಿಸಕೂಡದು.

ವಿದ್ಯಾರ್ಥಿಗಳಿಂದ ಪಡೆದ ಅರ್ಜಿಗಳನ್ನು ಕ್ರೋಢೀಕರಿಸಿದ ತಃಖ್ತೆಯೊಂದಿಗೆ ಆಯಾ ಕಾಲೇಜಿನವರು ಮರುಮೌಲ್ಯಮಾಪನಕ್ಕೆ ಕಳುಹಿಸಿದ ಮೊತ್ತದ ಬಗ್ಗೆ ಡಿ.ಡಿ. ಯಾ ಚಲನ್ನಿನ ಜೆರಾಕ್ಸ್ ಪ್ರತಿಯೊಂದಿಗೆ ಲಗತ್ತಿಸಿ ತಪ್ಪದೆ ಕಳುಹಿಸುವಂತೆ ಕೋರಲಾಗಿದೆ.



ಕುಲಸಚಿವರು (ಪರೀಕ್ಷಾಂಗ)

ರಿಗೆ:

ಪ್ರಾಂಶುಪಾಲರು

University College, Mangalore

ಲಗತ್ತು :

1) ಮರುಮೌಲ್ಯಮಾಪನ ಶುಲ್ಕ ಮರುಪಾವತಿ ಬಿಲ್ಲಿನ ನಮೂನೆ Click Here.

2) University College, Mangalore ನ ಮೇ 2019/ನವೆಂಬರ್ 2019/ಸೆಪ್ಟೆಂಬರ್ 2020ರ ಮರುಮೌಲ್ಯಮಾಪನ ಶುಲ್ಕ (Fees) ದ ಶೇ.50ರಷ್ಟನ್ನು ಹಿಂದಿರುಗಿ ಪಡೆದುಕೊಳ್ಳಲು ಅರ್ಹರಾದ ವಿದ್ಯಾರ್ಥಿಗಳ ಪಟ್ಟಿ Click Here .